ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ಎನ್ಎಸ್ - 19

3ನೇ ವರ್ಷ 32ನೇ ಸಂಚಿಕೆ ಕೊಪ್ಪ 21-4-1985 ಭಾನುವಾರ ಬೆಲೆ 40 ಪೈಸೆ

ಕೊಪ್ಪ ಅರಣ್ಯ ವಿಭಾಗ: 2 ಕೋಟಿ ರೂ. ಗಳಿಕೆ

ಕೊಪ್ಪ: ಅರಣ್ಯ ಇಲಾಖೆಯ ಕೊಪ್ಪ ವಿಭಾಗ ಈ ವರ್ಷ 2 ಕೋಟಿ 19 ಲಕ್ಷ ರೂ. ಗಳಷ್ಟು ಆದಾಯವನ್ನು (ಫಾರೆಸ್ಟ್ ರೆವಿನ್ಯೂ) ಗಳಿಸಿ ದಾಖಲೆ ನಿರ್ಮಿಸಿದೆ. ಕಳೆದ ವರ್ಷ ಈ ಮೊತ್ತ 1 ಕೋಟಿ 65 ಲಕ್ಷ ರೂ. ಆಗಿತ್ತು. ದಂಡ-ಮುಟ್ಟುಗೋಲುಗಳಿಂದಲೇ ಸುಮಾರು 4 ಲಕ್ಷ 40 ಸಾವಿರ ರೂ. ಗಳಿಸಿದ್ದು ಇದು ಹೋದ ವರ್ಷದ ಎರಡರಷ್ಟಾಗಿದೆ.

ಈ ಭಾರಿ ಗಳಿಕೆಗೆ ಮರಮುಟ್ಟು ಸಾಗಾಣಿಕೆಯಲ್ಲಿ ಒಳ್ಳೆಯ ಬೆಲೆ ಬಂದುದು ಮುಖ್ಯ ಕಾರಣವೆಂದು ವಿಭಾಗ ಅರಣ್ಯಾಧಿಕಾರಿ ವಿಜಯ ಲೂಥ್ರ 'ಮುಂಜಾವು'ಗೆ ತಿಳಿಸಿದರು.

ಸಿದ್ದರಮಠಕ್ಕೆ ಸೌಲಭ್ಯ: ಸಚಿವರ ಭರವಸೆ

ಸಿದ್ದರಮಠ: ಸಂಪರ್ಕವಂಚಿತವಾಗಿದ್ದು ಅತ್ಯಂತ ಹಿಂದುಳಿದಿರುವ ಈ ಪ್ರದೇಶದ ಅಭಿವೃದ್ಧಿಗಾಗಿ ರಸ್ತೆ, ಸಾರಿಗೆಸೌಲಭ್ಯ, ಆಸ್ಪತ್ರೆ ಮುಂತಾದ ಅವಶ್ಯಕತೆಗಳನ್ನು ಆದಷ್ಟು ಬೇಗನೆ ಪೂರೈಸಲು ಶ್ರಮಿಸುವುದಾಗಿ ಸಚಿವ ಗೋವಿಂದ ಗೌಡರು ಭರವಸೆ ನೀಡಿದರು.

ಅವರು ಏ. 12 ರಂದು ಇಲ್ಲಿನ ಶಾಲೆಯ ನೂತನ ವಿಸ್ತರಣಾ ಕಟ್ಟಡವನ್ನು ಉದ್ಘಾಟಿಸಿದರು. ಪಿ. ಜಿ. ಗುರ್ಜರ್ ಅಧ್ಯಕ್ಷತೆ ವಹಿಸಿದ್ದರು. ವಿಶೇಷ ಜಿಲ್ಲಾಧಿಕಾರಿ ಮಂಜುನಾಥ್ ಮತ್ತು ಎ. ಬಿ. ವಾಸಪ್ಪ ಮುಖ್ಯ ಅತಿಥಿಗಳಾಗಿದ್ದರು. ಎಂ.ಜಿ. ಶ್ರೀನಿವಾಸ್ ಸ್ವಾಗತಿಸಿ, ಹೆಚ್. ಎಸ್. ಕಳಸಪ್ಪ ವಂದಿಸಿದರು.

ಅಂಬೇಡ್ಕರ್ ಜನ್ಮ ದಿನದಂದು ಬೆಂಗಳೂರಲ್ಲಿ ದಲಿತರ ಬೃಹತ್ ಸಮಾವೇಶ

ಉತ್ತಮ ಮಾನವೀಯ ಸಂಸ್ಕೃತಿ ಕಟ್ಟುವ ಆಶಯ

ಬೆಂಗಳೂರು: ಅಸಮಾನತೆ, ಅನ್ಯಾಯಗಳ ಕೂಪವಾದ ಈ ನಾಡಿನಲ್ಲಿ ಒಂದು ಉತ್ತಮ ಮಾನವೀಯ ಸಂಸ್ಕೃತಿಯನ್ನು ಕಟ್ಟುವ ಆಶಯ ಇಲ್ಲಿ ಏ. 14 ರಂದು ನಡೆದ ಬೃಹತ್ ದಲಿತ ಸಮಾವೇಶದಲ್ಲಿ ವ್ಯಕ್ತವಾಯಿತು.

ಈ ದೇಶದ ದಲಿತ ವರ್ಗಗಳ ಏಳಿಗೆ, ವಿಮೋಚನೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟು ಹೋರಾಡಿದ ಡಾ॥ ಬಿ.ಆರ್. ಅಂಬೇಡ್ಕರ್ ಅವರ 94ನೇ ಜನ್ಮ ದಿನದ ಸಂದರ್ಭದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಏರ್ಪಡಿಸಿದ್ದ ಈ ಸಮಾವೇಶಕ್ಕೆ ರಾಜ್ಯದ ಎಲ್ಲ ಕಡೆಗಳಿಂದ ಮಹಿಳೆಯರೂ ಸೇರಿದಂತೆ ಮೂವತ್ತು ಸಾವಿರಕ್ಕೂ ಹೆಚ್ಚು ಮಂದಿ ದಲಿತರು ಬಹಳ ಕಷ್ಟಪಟ್ಟು ಬಂದಿದ್ದರು. ಅವರು ಸಾಂಪ್ರದಾಯಿಕ ಜಾನಪದ ನೃತ್ಯ, ವಾದ್ಯ ಮುಂತಾದುವುಗಳೊಂದಿಗೆ ವಿಧಾನ ಸೌಧದವರೆಗೆ ವರ್ಣರಂಜಿತ ಮೆರವಣಿಗೆ ನಡೆಸಿದರು.

ಕನ್ನಡದ ಸುಪ್ರಸಿದ್ಧ ಬರಹಗಾರ ಹಾಗೂ ದ. ಸಂ. ಸ. ರಾಜ್ಯ ಸಂಚಾಲಕ ದೇವನೂರ ಮಹಾದೇವ ಅವರು ದ. ಸಂ. ಸಮಿತಿಯ ನೂತನ ಧ್ವಜವನ್ನು ಉದ್ಘಾಟಿಸಿ, ಅದರ ಸಂಕೇತವನ್ನು ವಿವರಿಸುತ್ತ, "ಅವಮಾನಿತ ಶ್ರಮದ ಸಂಕೇತವಾದ 'ಪೊರಕೆ'ಯೊಡನೆ ಶ್ರಮದ ಸಂಕೇತವಾದ 'ಪಿಕಾಸಿ' ಐಕ್ಯಗೊಂಡಿದೆ. ಕೆಂಬಣ್ಣದೊಡನೆ ಕ್ರಾಂತಿಕಾರಕವಾಗಿ ಸೂರ್ಯನಂತೆ ಹುಟ್ಟಿ ಶ್ರಮವು ಹೂವಾಗಿ, ವಿಮೋಚನೆಯ ನೀಲಿ ನಮ್ಮೆಲ್ಲರದೂ ಆಗಲಿ" ಎಂದು ಆಶಿಸಿದರು.

ದಲಿತರ ದೈಹಿಕ ಕೊಳಕನ್ನು ತೋರಿಸುತ್ತಾ, ಸವರ್ಣೀಯರು ಮಾನಸಿಕವಾಗಿ ಕೊಳೆತು ನಾರುತಿದ್ದಾರೆ. ನಾವು ದಲಿತರು ಒಂದು ಉತ್ತಮ ಸಂಸ್ಕೃತಿ ಕಟ್ಟಬೇಕಾಗಿರವುದರಿಂದ ಇಂತಹ ಸವರ್ಣೀಯರನ್ನು ನಾಗರಿಕರನ್ನಾಗಿ ಮಾಡಬೇಕಾದ ವಿಚಿತ್ರ ಇಕ್ಕಟ್ಟಿನ ಹೊಣೆ ನಮ್ಮ ಎಲ್ಲ ಅವಮಾನ, ಬಡತನ, ಬವಣೆಗಳ ನಡುವೆಯೂ ನಮ್ಮ ಮೇಲೆಯೇ ಇದೆ ಎಂದರು.

ಪ್ರಸಿದ್ಧ ವಿಚಾರವಾದಿ ಮತ್ತು ಶಾಸಕ ಡಾ॥ಹೆಚ್. ನರಸಿಂಹಯ್ಯ ಸಮಾವೇಶವನ್ನು ಉದ್ಘಾಟಿಸಿದರು.

ಭಾರತದಲ್ಲಿ ದಲಿತರಮೇಲೆ ಅತ್ಯಾಚಾರ, ಕೊಲೆ, ಅವರ ಗುಡಿಸಲುಗಳಿಗೆ ಬೆಂಕಿ ಮುಂತಾದ ಘಟನೆಗಳು ದಿನವೂ ನಡೆಯುತ್ತಿರುವಾಗ ಈ ದೇಶವನ್ನು ಪುಣ್ಯಭೂಮಿಯೆಂದು ಕರೆಯುವುದರ ಔಚಿತ್ಯವನ್ನು ಖ್ಯಾತ ಕವಿ ಸಿದ್ಧಲಿಂಗಯ್ಯ ಪ್ರಶ್ನಿಸಿದರು.

ರಾಜ್ಯದಲ್ಲಿ ಮೀಸಲಾತಿಯನ್ನು 1950 ರಷ್ಟು ಹಿಂದೆಯೇ ಜಾರಿಗೆ ತರಲಾಗಿದ್ದರೂ, ಮೀಸಲು ಸ್ಥಾನಗಳ ಅರ್ಧದಷ್ಟು ಕೂಡ ಇನ್ನೂ ಭರ್ತಿಯಾಗಿಲ್ಲದಿರುವುದನ್ನು ಅಂಕೆ-ಸಂಖ್ಯೆಗಳಿಂದ ವಿವರಿಸಿದ ದ.ಸಂ.ಸ. ಅಧ್ಯಕ್ಷ ಬಿ. ಕೃಷ್ಣಪ್ಪ ಅವರು, ಗುಜರಾತಿನಲ್ಲಿ ನಡೆಯುತ್ತಿರುವಂಥ ಮೀಸಲಾತಿವಿರೋಧಿ ಚಳುವಳಿಯನ್ನೇನಾದರೂ ಕರ್ನಾಟಕ ಅಥವಾ ದಕ್ಷಿಣದ ರಾಜ್ಯಗಳಲ್ಲಿ ಎಬ್ಬಿಸುವ ಯತ್ನಗಳು ನಡೆದಲ್ಲಿ ದ. ಸಂ. ಸಮಿತಿಯಂಥ ಸಂಘಟನೆಗಳಿಂದ ಉಗ್ರವಾದ ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆಂದು ಎಚ್ಚರಿಸಿದರು.

ಎಲ್ಲ ರಾಜಕೀಯಪಕ್ಷಗಳೂ ದಲಿತರನ್ನು ಓಟಿನ ಆಸೆಗಾಗಿ ಮರುಳುಗೊಳಿಸಲು ಯತ್ನಿಸುತ್ತಿರುವುದನ್ನು ಉಗ್ರವಾಗಿ ಖಂಡಿಸಿದ ಅವರು, ಚೂರುಪಾರು ಸೌಲತ್ತುಗಳನ್ನು ನೀಡುವುದರ ಬದಲು ಅವರನ್ನು ಉತ್ಪಾದನೆಯ ಕೆಲಸದಲ್ಲಿ ತೊಡಗಿಸಬೇಕೆಂದು ಒತ್ತಾಯಿಸಿದರು.

ಆಂಧ್ರದ ನಾಗರಿಕ ಹಕ್ಕುಗಳ ಹೋರಾಟಗಾರ ಬಿ. ತಾರಕಂ, ದಲಿತರು ಸಮಾನತೆ ಮತ್ತು ರಾಜಕೀಯ ಅಧಿಕಾರಕ್ಕಾಗಿ ಹೋರಾಡುವುದರಿಂದ ಮಾತ್ರ ತಮ್ಮ ಹಕ್ಕುಗಳನ್ನು ಪಡೆಯಲು ಸಾಧ್ಯವೆಂದರು. ತಮಿಳುನಾಡಿನ ದ್ರವಿಡ ಕಳಗಂನ ವೀರಮಣಿ, 'ನಮ್ಮ ದೇಶದ ಆಡಳಿತಗಾರರು ದೇಶದ ಸಂವಿಧಾನ ರೂಪಿಸಲು ಅಂಬೇಡ್ಕರ್ ಅವರನ್ನು ಮಾತ್ರ ಬಳಸಿಕೊಂಡರು ಹೊರತು ಅವರ ತತ್ವಗಳನ್ನಲ್ಲ' ಎಂದರು.

ರಾಜ್ಯದ ದಲಿತ ಚಳುವಳಿಯ ಮಾರ್ಗದಲ್ಲಿ ಈ ಸಮಾವೇಶವೊಂದು ಪ್ರಮುಖ ಮೈಲಿಗಲ್ಲಾಯಿತು.

ಶಿವಮೊಗ್ಗ ಅಡಿಕೆ ಪೇಟೆ

ತಾರೀಕು: 17-4-1985

('ಏವೀಶಂ' ಅವರಿಂದ)

ಸರಕು: 2805 – 3059

ಬೆಟ್ಟೆ: 2250 – 2489

ಗೊರಬಲು: 1850 – 1950

ಬೆಟ್ಟೆಯ ಧಾರಣೆಯಲ್ಲಿ ಸುಮಾರು ಏಳೆಂಟು ನೂರು ರೂ. ಜಾಸ್ತಿಯಾಗಿದ್ದರೆ ಸರಕು ಒಂದೆರಡು ವಾರದಿಂದ ಒಂದೇ ರೀತಿ ಕಂಡುಬರುತ್ತಿದೆ.

ಸಕಲೇಶಪುರ ಏಲಕ್ಕಿ ಧಾರಣೆ

ವ್ಯಾಪಾರದ ತಾರೀಕು	ಗರಿಷ್ಠ ಧಾರಣೆ	ಸರಾಸರಿ ಧಾರಣೆ
9.4.85	306	200
10.4.85	310	140
11.4.85	303	142
12.4.85	312	171

ಸಂಭ್ರಮ ವಿಜೃಂಭಣೆಯೊಡನೆ ಕೊಪ್ಪದಲ್ಲಿ

ದಾಸಮಠ ಸಂಸ್ಥಾನಕ್ಕೆ ಪುನರುಜ್ಜೀವನ

ಕೊಪ್ಪ: ಸುಮಾರು ನಲವತ್ತೈವತ್ತು ವರ್ಷಗಳ ಹಿಂದೆ ಒಂದು ಧರ್ಮಪೀಠವಾಗಿದ್ದು ಕಾಲಗರ್ಭದಲ್ಲಿ ಹೂತು ಜನರ ನೆನಪಿನಿಂದ ಮಾಸಿ ಹೋಗಿದ್ದ ಇಲ್ಲಿನ ದೇವಸ್ಥಾನವೊಂದು ಪುನರ್ ನಿರ್ಮಾಣಗೊಂಡು ಏ. 14 ರಂದು ಮರಳಿ ಪ್ರತಿಷ್ಠಾಪಿಸಲ್ಪಟ್ಟಿತು.

ಕೊಪ್ಪ-ಜಯಪುರ ರಸ್ತೆಯಲ್ಲಿ ಗುತ್ತಿಯಮ್ಮನ ದೇವಸ್ಥಾನದ ಹತ್ತಿರ ಹಿಂದೆ ಮಠವಿದ್ದ ಸ್ಥಳದಲ್ಲಿ ಹೊಸದಾಗಿ ನಿರ್ಮಾಣವಾಗಿರುವ ವೆಂಕಟೇಶ್ವರ ದೇವಸ್ಥಾನದಲ್ಲಿ ನೂತನ ಮೂರ್ತಿ ಪ್ರತಿಷ್ಠೆ ಮತ್ತು ಕುಂಭಾಭಿಷೇಕ ಕಾರ್ಯಕ್ರಮಗಳು ಹರಿಹರಪುರ ಮತ್ತು ಆದಿಚುಂಚನಗಿರಿಮಠಾಧೀಶರುಗಳನೇತೃತ್ವದಲ್ಲಿ ಸಂಭ್ರಮ ಮತ್ತು ವಿಜೃಂಭಣೆಯಿಂದ ನಡೆದವು. ಅನಂತರ ರಥೋತ್ಸವ ನಡೆಯಿತು.

ಅನಂತರ ನಡೆದ ಧಾರ್ಮಿಕ ಸಭೆಯಲ್ಲಿ ಇಬ್ಬರು ಗುರುಗಳೂ ಸಮಯೋಚಿತವಾಗಿ ಆಶೀರ್ವಚನನೀಡಿದರು. ಹೆಚ್.ಜಿ. ಗೋವಿಂದಗೌಡ ಮುಖ್ಯ ಅತಿಥಿಯಾಗಿದ್ದರು. ಎಂ.ಡಿ ಬಾಲಕೃಷ್ಣ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ದೇವಸ್ಥಾನದ ನಿರ್ಮಾಣದಲ್ಲಿ ಶ್ರಮಿಸಿದ ನಾಲ್ವರು ಕುಶಲ ಕರ್ಮಿಗಳಾದ ಕಲ್ಲಿನ ಶಿಲ್ಪಿ ಆರ್. ಕೃಷ್ಣಾಚಾರ್, ಮರದ ಕೆಲಸ ನಿರ್ವಹಿಸಿದ್ದ ಶ್ರೀನಿವಾಸಾಚಾರ್, ಗಾರೆ ಕೆಲಸ ಮಾಡಿದ ಅಬೂಬೇಕರ್ ಮತ್ತು ಕಬ್ಬಿಣದ ಕೆಲಸದ ಮುತ್ತಯ್ಯಾಚಾರ್ ಇವರುಗಳನ್ನು ಶಾಲು ಹೊದಿಸಿ ಸನ್ಮಾನಿಸಲಾಯಿತು.

ಬಿ. ಜಿ. ಚಿದಂಬರ್ ಸ್ವಾಗತ ಭಾಷಣ ಮಾಡಿದರು. ಕೆ. ಎಸ್. ಪದ್ಮನಾಭ ವರದಿ ಓದಿದರು. ದೇವಸ್ಥಾನದ ಸಮಿತಿ ಖಜಾಂಚಿ ತಹಸೀಲ್ದಾರ್ ಎಸ್. ಕಾಳೇಗೌಡ ವಂದಿಸಿದರು.

ಐದು ಸಾವಿರಕ್ಕೂ ಹೆಚ್ಚು ಜನರಿಗೆ ಪಂಕ್ತಿ ಭೋಜನ ನಡೆಯಿತು.

ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ, ದೀಪೋತ್ಸವ ನಡೆದವು.

ಉತ್ತಮೇಶ್ವರ ಸರ್ಕಾರಿ ಆಸ್ಪತ್ರೆಯ

ಅಭಿವೃದ್ಧಿಯ ಸಹಾಯಾರ್ಥ

ಶ್ರೀ ಸುಬ್ರಹ್ಮಣ್ಯ ಮಠಾಧೀಶರಾದ

ಶ್ರೀ ಶ್ರೀ ವಿದ್ಯಾಭೂಷಣ ತೀರ್ಥರುಗಳವರಿಂದ

ಭಕ್ತಿಮಾಲಾ ಕಾರ್ಯಕ್ರಮ

ದಿನಾಂಕ: 30-4-85ನೇ ಮಂಗಳವಾರ

ಸಮಯ: ಸಂಜೆ 6 ಗಂಟೆಯಿಂದ

ಸ್ಥಳ: ಆರೂರು ಜಲಜಾಕ್ಷಮ್ಮ ಕಲ್ಯಾಣಮಂಟಪ, ಕೊಪ್ಪ

ಪ್ರವೇಶಧನ: ರೂ. 50, 25, 10, 5.

ಶಾಲಾ ಪಠ್ಯದ ಜೊತೆಗೆ ಆಟೋಟಗಳನ್ನೂ ಕಲಿಸುವ

ದೇಶದಲ್ಲೇ ಮೊಟ್ಟಮೊದಲ ಕ್ರೀಡಾಶಾಲೆ

ಕರ್ನಾಟಕವು ಕ್ರೀಡಾ ಸಾಮರ್ಥ್ಯದಲ್ಲಿ ಹಿಂದೆಬಿದ್ದಿರುವುದನ್ನು ಗಮನಿಸಿ ಸರ್ಕಾರವು ಕ್ರೀಡಾ ಹಾಗೂ ಯುವಜನ ಸೇವಾ ಇಲಾಖೆಯೊಂದನ್ನು ತೆರೆದಿದೆ. ಆದರೆ ಪ್ರೌಢ ಶಾಲೆಯ ಮಟ್ಟದವರೆಗಿನ ಪಾಠ ಪ್ರವಚನಗಳನ್ನೊಳಗೊಂಡ 'ಕ್ರೀಡಾ ಶಾಲೆ'ಯೊಂದನ್ನು ಕ್ರೀಡಾಸಕ್ತರು ಸಹಕಾರ ತತ್ವದೊಂದಿಗೆ ಬೆಳಗಾವಿ ಜಿಲ್ಲೆಯಲ್ಲಿ ಆರಂಭಿಸಿರುವುದು ಬಹುಶಃ ದೇಶದಲ್ಲೇ ಮೊದಲು.

ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಚಂದಗಿರಿಯಲ್ಲಿ ಕಳೆದ ಆಗಸ್ಟ್ ೮೪ ರಲ್ಲಿ ಈ ಶಾಲೆ ಆರಂಭವಾಗಿದ್ದು, ಐದನೆ ವರ್ಗದಿಂದ ಆರಂಭವಾಗುವ ಈ ಶಾಲೆಯಲ್ಲಿ ಇತರ ಬೋಧನ ಕ್ರಮದ ಜೊತೆಗೆ ಕ್ರೀಡಾವಿಷಯಗಳಲ್ಲೂ 'ತರಬೇತಿ' ನೀಡಲಾಗುತ್ತಿದೆ.

ಮುಂದಿನ ವರ್ಷಗಳಲ್ಲಿ ಪೂರ್ಣ ಸುಸಜ್ಜಿತವಾಗಿ ಕ್ರೀಡಾ ಶಾಲೆ ಬೆಳೆದಲ್ಲಿ ಕ್ರೀಡೆಗೆ ಬೇಕಾಗುವ ಎಲ್ಲಾ ತರದ ಉಪಕರಣಗಳನ್ನು ತಯಾರಿಸುವ ಬೃಹತ್ ಯೋಜನೆಯೊಂದನ್ನು ಈ ಶಾಲೆಯ ಸಹಕಾರಿಗಳು ಹಾಕಿಕೊಂಡಿರುವರು. ಇದು ಕೈಗೂಡಿದಲ್ಲಿ ರಾಜ್ಯದವರೇ ರಾಷ್ಟ್ರದ ಬಹುತೇಕ ಶಾಲಾ ಕಾಲೇಜುಗಳ ಆಟದ ಉಪಕರಣಗಳನ್ನು ತಯಾರಿಸಿ ವಿತರಣೆ ಮಾಡುವ ಆಶಯವನ್ನು ಹೊಂದಿದಂತಾಗುವುದು. ಸ್ವಂತ ಉಪಯೋಗಕ್ಕಾಗಿ ಡೈರಿಯೊಂದನ್ನು ಸಹ ಆರಂಭಿಸಲು ಯೋಜನೆಯೊಂದನ್ನು ಹಾಕಿಕೊಳ್ಳಲಾಗಿದೆ.

ಈ ಶಾಲೆಗೆ ಐದನೇ ವರ್ಗಕ್ಕೆ ಸೇರ ಬಯಸುವ ಮಕ್ಕಳು ದೈಹಿಕ ಪರೀಕ್ಷೆ, ಆರೋಗ್ಯ ಪರೀಕ್ಷೆ ಹಾಗೂ ಬುದ್ಧಿ ಶಾಸ್ತ್ರ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು.

ಪ್ರತಿ ತಿಂಗಳು ಊಟ, ವಸತಿ ವೆಚ್ಚ ಸುಮಾರು ೩೫೦ ರೂ. ಗಳಾಗಬಹುದು.

ವರ್ಷ ಪೂರ್ತಿ ಸಮವಸ್ತ್ರ ಇತರ ಸಾಧಾರಣ ಉಡುಪು, ಹಾಸಿಗೆ ಪುಸ್ತಕ ಮತ್ತು ದಿನ ನಿತ್ಯದ ಅವಶ್ಯಕತೆಗಳಿಗಾಗಿ ಆರಂಭದಲ್ಲಿ ೬೩೮ ರೂ. ನೀಡಬೇಕಾಗುವುದು ಹಾಗೂ ೧೫೦ ರೂ. ಗಳನ್ನು ಮುಂಗಡವಾಗಿ (ಅಂತ್ಯದಲ್ಲಿ ಹಿಂದಿರುಗಿಸಲಾಗುವುದು.) ನೊಂದಣಿಗಾಗಿ ೫೫ ರೂ. ನೀಡಬೇಕು. ಮುಂದಿನ ೮೫-೮೬ರ ಸಾಲಿಗೆ ೪೦ ವಿದ್ಯಾರ್ಥಿಗಳು ಸೇರಬಹುದಾಗಿದೆ. ಸದ್ಯದಲ್ಲಿ ೩೩ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿರುವರು ಇವರಲ್ಲಿ ಓರ್ವ ಪರಿಶಿಷ್ಟ ಜನಾಂಗದ ವಿದ್ಯಾರ್ಥಿ ಇದ್ದು ಆತನ ಅಭ್ಯಾಸಕ್ಕೆ ಸಂಬಂಧಿಸಿದ ಭೋಜನ ಶುಲ್ಕವನ್ನು ಮಾತ್ರ ವಜಾ ಮಾಡಲಾಗಿದೆ.

ಇಂಥ ಸಹಕಾರಿ ಕ್ರೀಡಾ ಶಾಲೆ ಪ್ರತಿ ಜಿಲ್ಲೆಯಲ್ಲಿ ಪ್ರಾರಂಭಿಸಿದಲ್ಲಿ ಸ್ಥಳೀಯ ಮಕ್ಕಳಲ್ಲಿ ಕ್ರೀಡಾಸಕ್ತಿ ಉಂಟು ಮಾಡಬಹುದಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲೂ ಇಂಥ ಶಾಲೆ ಪ್ರಾರಭವಾಗುವ ಬಗ್ಗೆ ಆಶಿಸೋಣ.

('ಕರ್ನಾಟಕ ಮುನ್ನಡೆ'ಯಿಂದ)

'ಮಣ್ಣು ರಕ್ಷಣಾ ಕೂಟ'ದಿಂದ ನೀಲಗಿರಿಗೆ ವಿರೋಧ

ಬಾಳೆಹೊನ್ನೂರು: ರಾಜ್ಯದಲ್ಲಿರುವ ಹಲವು ಸ್ವಯಂಸೇವಾಸಂಸ್ಥೆಗಳು ಒಟ್ಟುಗೂಡಿ, 'ಮಣ್ಣು ರಕ್ಷಣಾ ಕೂಟ' ಎಂಬ ರಾಜ್ಯ ಮಟ್ಟದ ಪರಿಸರ ಸಂರಕ್ಷಣಾ ವೇದಿಕೆಯನ್ನು ರಚಿಸಲಾಗಿದೆ.

ಇದರ ಆಶ್ರಯದಲ್ಲಿ ಏ.25 ರಂದು ಬೆಳಿಗ್ಗೆ ಚಿಕ್ಕಮಗಳೂರಿನ ಎಂ.ಎಲ್.ವಿ. ರೋಟರಿ ಹಾಲ್‌ನಲ್ಲಿ ರಾಜ್ಯಮಟ್ಟದ ಸಮಾವೇಶ ಜರುಗಲಿದೆ.

ಚಿಕ್ಕಮಗಳೂರು, ಕೊಪ್ಪ, ಸಾಗರ, ಭದ್ರಾವತಿ, ಶಿವಮೊಗ್ಗ ತಾಲ್ಲೂಕುಗಳ ಸುಮಾರು 30,000 ಹೆಕ್ಟೇರ್ ಪ್ರದೇಶದಲ್ಲಿ ನೀಲಗಿರಿ ಬೆಳೆಸಿ ಹರಿಹರ ಪಾಲಿಫೈ ಬರ್ಸ್‌ಗೆ ಸರಬರಾಜು ಮಾಡುವ ಬಗ್ಗೆ ರಾಜ್ಯ ಸರ್ಕಾರ ಬಿರ್ಲಾ ಕಂಪನಿಯೊಂದಿಗೆ ಮಾಡಿ ಕೊಂಡಿರುವ ಒಪ್ಪಂದವನ್ನು ರದ್ದು ಪಡಿಸುವಂತೆ ಒತ್ತಾಯಿಸುತ್ತಿರುವ ಕೂಟ ಈ ಕುರಿತು ರಾಜ್ಯಾದ್ಯಂತ, ಮುಖ್ಯವಾಗಿ ಸಂಬಂಧಪಟ್ಟ ಪ್ರದೇಶಗಳಲ್ಲಿ, ಜನ ಜಾಗೃತಿ ಉಂಟು ಮಾಡಲು ಕಾರ್ಯಕ್ರಮ ಹಾಕಿಕೊಂಡಿದೆ.

ಸುದ್ದಿ ವಿಶೇಷ

ಬೆಳೆ ನಷ್ಟಕ್ಕೆ ಖಚಿತ ವಿಮೆ ಪರಿಹಾರ

ಬೆಳೆ ವಿಮೆಯ ಸಮಗ್ರ ಯೋಜನೆಯೊಂದನ್ನು ಕೇಂದ್ರ ಹಣಕಾಸು ಮಂತ್ರಿ ವಿ.ಪಿ. ಸಿಂಗ್ ಅವರು ಈಚೆಗೆ ಲೋಕಸಭೆಯಲ್ಲಿ ಪ್ರಕಟಿಸಿದ್ದಾರೆ

ಬೆಲೆ ಬೆಂಬಲ ಯೋಜನೆ ಮುಂದುವರಿಸುವುದರ ಜತೆಗೆ ಪ್ರವಾಹದ ಹಾವಳಿ ಹಾಗೂ ಅನಾವೃಷ್ಟಿಯಿಂದ ಬೆಳೆ ಹಾಳಾದಾಗ ರೈತರು ಹಾಗೂ ಅವರ ಕುಟುಂಬಗಳನ್ನು ರಕ್ಷಿಸುವುದೇ ಬೆಳೆ ವಿಮೆ ಯೋಜನೆ ಉದ್ದೇಶ ಎಂದಿದ್ದಾರೆ.

ಎಲ್ಲ ಬೆಳೆ ಸಾಲಕ್ಕೆ ವಿಮೆ ಸೌಲಭ್ಯ ಇದ್ದು, ಬೆಳೆ ಸಾಲದ ಶೇ.150 ರಷ್ಟರವರೆಗೆ ವಿಮೆ ಸೌಲಭ್ಯ ನೀಡಲಾಗುವುದು.

ಆರಂಭದಲ್ಲಿ ಈ ಬೆಳೆ ವಿಮೆ ಯೋಜನೆಯನ್ನು ಗೋಧಿ, ಬತ್ತ, ಎಣ್ಣೆ ಬೀಜ ಮತ್ತು ದ್ವಿದಳಧಾನ್ಯಕ್ಕೆ ಅನ್ವಯಿಸಲಾಗುವುದು.

ವಿಮೆ ಶುಲ್ಕವು ಕಡಿಮೆ ಅಲ್ಲದೆ ಸಣ್ಣ-ಪುಟ್ಟ ರೈತರ ಬಗ್ಗೆ ವಿಮೆ ಶುಲ್ಕದ ಮೂರನೇ ಎರಡು ಭಾಗದಷ್ಟನ್ನು ಕೇಂದ್ರ ಮತ್ತು ರಾಜ್ಯಗಳು ಸಮ-ಸಮವಾಗಿ ಕೊಡುವುದೆಂದರು.

ಆಹಾರ ಧಾನ್ಯ, ರಸಗೊಬ್ಬರ ಸಬ್ಸಿಡಿ ಏರಿಕೆ

ಆಹಾರದ ಮೇಲಿನ ಸಬ್ಸಿಡಿಯನ್ನು 850 ಕೋಟಿ ರೂ. ನಿಂದ 1100 ಕೋಟಿ ರೂ. ಗೆ ಹೆಚ್ಚಿಸಲಾಗಿದೆ.

ಬತ್ತದ ಸಂಗ್ರಹಣೆ ಬೆಲೆ ಏರಿಕೆ, ಗೋಧಿ ಮಾರಾಟದಿಂದ ಅಲ್ಪ ಆದಾಯ, ಮತ್ತು ಆಹಾರ ಧಾನ್ಯ ದಾಸ್ತಾನಿನಲ್ಲಿ ತೀವ್ರ ಏರಿಕೆ ಈ ಕಾರಣಗಳಿಂದಾಗಿ ಸಬ್ಸಿಡಿ ಹೆಚ್ಚಿಸಲಾಗಿದೆಯೆಂದು ಅರ್ಥಸಚಿವ ವಿ. ಪಿ. ಸಿಂಗ್ ಅವರು ಬಜೆಟ್ ಮಂಡಿಸುತ್ತಾ ತಿಳಿಸಿದರು.

ದೇಶದಲ್ಲಿ ಉತ್ಪಾದನೆಯಾದ ರಸಗೊಬ್ಬರದ ಮೇಲಿನ ಸಬ್ಸಿಡಿಯನ್ನು 930 ಕೋಟಿ ರೂ. ನಿಂದ 1200 ಕೋಟಿ ರೂ. ಮತ್ತು ಆಮದು ರಸಗೊಬ್ಬರದ ಮೇಲಿನ ಸಬ್ಸಿಡಿಯನ್ನು 120 ಕೋಟಿರೂ. ನಿಂದ 632 ಕೋಟಿ ರೂ. ಗೆ ಹೆಚ್ಚಿಸಲಾಗಿದೆ.

ಪದ್ಯದಂಕಣ

ಯಾರಿಗೆ ಹುಚ್ಚು?

ಏ, ಹುಚ್ಚ!
ಎಲ್ರೂ ನಿನ್ಗೆ ಹುಚ್ಚಾ ಅಂತ
ಕಲ್ಲು ಹೊಡೀತಾರಲ್ಲಾ
ನಿನ್ಗೆ ಹುಚ್ಚೋ ನಮ್ಗೇ ಹುಚ್ಚೋ
ಒಂದೂ ತಿಳಿಯೋದಿಲ್ಲಾ
ಕಂಡ ಕಂಡ ಕಲ್ಗಳಿಗೆಲ್ಲಾ
ಕೈ ಮುಗ್ದು ಕಾಯ್ ಒಡಿತೀವಲ್ಲಾ
ದೇವ್ರೂ ಗೀವ್ರೂ ಅಂತ ಹೇಳ್ಕೊಂಡ್
ಹೊಟ್ಟೆ ಹೊರೀತೀವಲ್ಲಾ
ಕ್ರಾಂತಿ ಗೀಂತಿ ಅಂತಾ ಹೇಳ್ತಾ
ಬೆಂಕಿ ಇಡ್ತೀವಲ್ಲಾ
ನಿನ್ಗೆ ಹುಚ್ಚೋ ನಮ್ಗೇ ಹುಚ್ಚೋ
ಒಂದೂ ತಿಳಿಯೋದಿಲ್ಲಾ
ಹೆಂಡ ಕುಡ್ಕೊಂಡ್ ಹಣಾ ತಗೊಂಡ್
ಓಟು ಹಾಕ್ತೀವಲ್ಲಾ
ಲಂಚ ತಗೊಂಡ್ ಮಂಡೆ ಮುರುದ್ರು
ಅವ್ರನ್ನೇ ಮತ್ತೆ ಆರಿಸ್ತೀವಲ್ಲಾ
ನಾನು ಮೇಲು ನೀನು ಕೀಳು
ಅಂತ ಕಚ್ಚಾಡ್ತೀವಲ್ಲಾ
ನಿನ್ಗೆ ಹುಚ್ಚೋ ನಮ್ಗೇ ಹುಚ್ಚೋ
ಒಂದೂ ತಿಳಿಯೋದಿಲ್ಲಾ!

(ಚಾವಲ್ಮನೆ ಸುರೇಶ್ ನಾಯಕ್)

"ತಡೆಯಲಸಾಧ್ಯವಾಗಿರುವ ಹುಲಿ ಕಾಟ ನಿವಾರಣೆಗೆ ಅರಣ್ಯ ಇಲಾಖೆ ಉಪಾಯ ಹುಡುಕಲೇಬೇಕು"

ಈಚೆಗೆ ಸ್ವಲ್ಪ ಸಮಯದಿಂದ ನಮ್ಮ ಪತ್ರಿಕೆಯಲ್ಲಿ ನಮ್ಮ ಹಳ್ಳಿಗಳಲ್ಲಿನ ಹುಲಿ ಹಾವಳಿಯ ಬಗ್ಗೆ ವರದಿಗಳು, ಬರಹಗಳು ಸ್ವಲ್ಪ ಕಮ್ಮಿಯಾಗಿದ್ದವು. ಇದಕ್ಕೆ ಕಾರಣ ಹಾವಳಿಯೂ ಸ್ವಲ್ಪ ಕಮ್ಮಿಯಾಗಿದ್ದುದಿರಬಹುದಾದರೂ, ಜನ ಅದರ ಬಗ್ಗೆ ದೂರು ಹೇಳಿ, ಪರಿಹಾರ ಕೇಳಿ ಹತಾಶರಾಗಿ ಸುಮ್ಮಗಾಗಿರುವುದೂ ಒಂದು ಕಾರಣವಿರಬೇಕು.

ಈಗ, ಕೊಪ್ಪ ತಾ|| ಬಿಲಗದ್ದೆ ಗ್ರಾಮದ ಹುಲುಗಾರು ಸುತ್ತ ಮುತ್ತಲ ಹಳ್ಳಿಗರು ತಮ್ಮಲ್ಲಿನ ಹುಲಿ ಬಾಧೆ ತಡಕೊಳ್ಳಲು ಸಾಧ್ಯವೇ ಇಲ್ಲದಷ್ಟಾಗಿದೆ ಎಂದು ತಿಳಿಸಿದ್ದಾರೆ. ಅಲ್ಲಿನ ದಟ್ಟ ಕಾಡು ಮತ್ತು ಗುಡ್ಡದಲ್ಲಿ ಒಂದು ಭಾರಿ ಹುಲಿ ಸೇರಿಕೊಂಡು ಈಗ ಎರಡು ವರ್ಷದ ಮೇಲಾಯಿತಂತೆ. ಅದು ಪ್ರತಿ ಮನೆಯಿಂದಲೂ ಕನಿಷ್ಠ ಮೂರು-ನಾಲ್ಕರಿಂದ ಹಿಡಿದು ಕೆಲವೆಡೆ ಹತ್ತು-ಹನ್ನೆರಡು ಜಾನುವಾರುಗಳ ವರೆಗೂ ಹಿಡಿದಿದೆಯೆಂದೂ ಒಟ್ಟು ನೂರಕ್ಕೂ ಹೆಚ್ಚು ಜಾನುವಾರುಗಳು ಅದಕ್ಕೆ ಬಲಿಯಾಗಿ ಊರಿನಲ್ಲಿ ಸರಿಯಾದ ಒಂದು ಜೊತೆ ಎತ್ತಾಗಲಿ ಒಂದು ಒಳ್ಳೆಯ ದನವಾಗಲಿ ಇಲ್ಲ ಎನ್ನುತ್ತಾರೆ. ಅದರ ಕೆಲವು 'ಪ್ರಕರಣ'ಗಳು ಅವರು ಹೇಳಿದ್ದು ಹೀಗಿವೆ:

ಗಣಪಯ್ಯ ಆಚಾರಿ ಎಂಬ ಬಡ ರೈತರೇ ಕಾಡಿನ ಒತ್ತಿನಲ್ಲಿ ಸ್ವಲ್ಪ ದರ್ಖಾಸ್ತು ಮಾಡಿ ಮನೆ ಮಾಡಿಕೊಂಡಿದ್ದಾರೆ. ಅವರ ಒಂದು ಗಬ್ಬದ ದನ-ಮೂರ್ನಾಲ್ಕು ದಿನದಲ್ಲಿ ಕರು ಹಾಕುವಂಥದು-ಮೇವಿನಿಂದ ಹಿಂದೆ ಬರಲಿಲ್ಲ. ಆದಕ್ಕಾಗಿ ಹುಡುಕಾಡಿ, ಹುಲಿ ಬಾಯಿಗೆ ಬಿದ್ದುದನ್ನು ಖಾತ್ರಿ ಮಾಡಿಕೊಂಡು ಮನೆಗೆ ಬರುವಷ್ಟರಲ್ಲಿ ಇದ್ದ ಒಂದೇ ಜೊತೆ ಹೂಟಿ ಎತ್ತುಗಳಲ್ಲಿ ಒಂದು ಹುಲಿಗೆ ಆಹಾರವಾಗಿತ್ತು.

ಮತ್ತೊಬ್ಬ ರೈತರ ಮನೆಯಲ್ಲಿ ಒಂದು ಕೌಲೆ ದನಕ್ಕೆ ಕಾಯಿಲೆಯಾಗಿ, ನೂರಾರು ರೂಪಾಯಿ ಖರ್ಚುಮಾಡಿ ವಾರಗಟ್ಟಲೆ ಔಷಧಿ ಮಾಡಿ ಅದನ್ನು ಗುಣಪಡಿಸಿ ಮೇಯಲು ಬಿಟ್ಟ ದಿನವೇ ಹುಲಿಗೆ ಆಹುತಿ ಆಯಿತು.

ದರಗಿಗೆ, ಸೌದೆಗೆಂದು ಕಾಡಿಗೆ ಹೋದವರಿಗೆಲ್ಲ ಹಗಲೇ ಹುಲಿ ಕಾಣಿಸಿಕೊಂಡು ಅವರಲ್ಲೆಲ್ಲ ಭೀತಿ ಉಂಟಾಗಿದೆ. ಒಬ್ಬ ಮಹಿಳೆ ಹೀಗೆ ಹುಲಿ ಕಂಡು ಹೆದರಿ ಓಡಿ ಅಬರಿಗೆ ಬಿದ್ದು ತೀವ್ರವಾಗಿ ಗಾಯಗೊಂಡು ಚಿಕಿತ್ಸೆಗೆ ತೀರ್ಥಹಳ್ಳಿ ಆಸ್ಪತ್ರೆಗೆ ಒಯ್ಯಬೇಕಾಯಿತು.

ಗುಡ್ಡದ ಮೇಲೆ ನಾಟ ಕುಯ್ದು ದೂರಿನ ಮೇಲೆ ಪತ್ತೆ ಹಚ್ಚಲು ಹೋದ ಒಬ್ಬ ಗಾರ್ಡ್‌ಗೆ ಹುಲಿ ಎದುರಾಗಿ ಅವರು ಕೆಟ್ಟೆನೋ-ಬಿದ್ದೆನೋ ಎಂದು ಓಡಿ ಬಂದವರು ಈಗ ಆ ಗುಡ್ಡದ ಕಡೆ ಮುಖ ಹಾಕುವುದಿಲ್ಲ. ಅಲ್ಲಿನ ಚಟುವಟಿಕೆ ಬಿರುಸಾಗಿ ಸಾಗುತ್ತಿದೆ.

ಹಲವಾರು ಜಾನುವಾರುಗಳು ಹುಲಿಯ ಕೈಯಿಂದ ಹೇಗೋ ತಪ್ಪಿಸಿ ಕೊಂಡು ಬಂದು ಕೊಟ್ಟಿಗೆಯಲ್ಲಿ ಬಿದ್ದು ನರಳಿ ಸಾಯುತ್ತಿವೆ. ಹುಲಿ ಜನವಸತಿಯ ಆಜುಬಾಜಿನಲ್ಲೇ ಬಂದು ಬೇಟೆ ಹಿಡಿಯುತ್ತಿದೆ.

ಇತ್ಯಾದಿ.

ಇತ್ತ, ಹೀಗೆ ಸತ್ತ ಜಾನುವಾರುಗಳಿಗೆ ಸರ್ಕಾರ ಕೊಡುವ ಪರಿಹಾರಕ್ಕೆ ಅರ್ಜಿ ಸಲ್ಲಿಸುವುದೂ ಒಂದು ದೊಡ್ಡ ಸಾಹಸವೇ. ಅದರ ಮೇಲೆ, ಸ್ಟೇಟ್ ಫಾರೆಸ್ಟ್‌ನಲ್ಲಿ ಹಿಡಿದರೆ ಮಾತ್ರ ಪರಿಹಾರ ಎಂಬ ನಿಬಂಧನೆ ಬೇರೆಯಂತೆ. (ಈ ನಿಬಂಧನೆ ತೆಗೆಸಿ ಹಾಕಿರುವುದಾಗಿ ಗೋವಿಂದ ಗೌಡರು ಹೇಳಿದ್ದರು. ಆದರೆ ಈ ಸಂಬಂಧದಲ್ಲಿ ಸರ್ಕಾರ ಆದೇಶ ಹೊರಡಿಸಿದೆಯೋ, ಇಲ್ಲವೋ ಗೊತ್ತಿಲ್ಲ.)

‡ ‡ ‡

(3ನೇ ಪುಟಕ್ಕೆ)

ಓದುಗರ ಪತ್ರಗಳು

ಚಿಮಣಿಯಾಗಿರುವ ವಿದ್ಯುದ್ದೀಪ

ಮಾನ್ಯರೆ,

ಎರಡುವರ್ಷದ ಹಿಂದೆ ಸೂರ್ಳಿಯ ಕೆ.ಇ.ಬಿ. ಟ್ರಾನ್ಸ್‌ಫಾರ್ಮರಿನಿಂದ ದೇವರಮನೆಗೆ ಚಾರ್ಜ್ ಮಾಡಿದಲಾಗಾಯ್ತು ಈ ಎರಡೂ ಕಡೆಗಳಲ್ಲಿ ವಿದ್ಯುದ್ದೀಪ ವೋಲ್ಟೇಜ್ ಸಾಲದೆ ಚಿಮಣಿ ದೀಪದಂತೆ ಉರಿಯುತ್ತಿದ್ದು, ದೀಪ ಹಾಕಿಸಿಯೂ ಪ್ರಯೋಜನವಿಲ್ಲವಾಗಿದೆ. ಸಂಬಂಧಪಟ್ಟವರಿಗೆ ಎಷ್ಟು ತಿಳಿಸಿದರೂ ಪ್ರಯೋಜನವಿಲ್ಲವಾಗಿದೆ.

ಇನ್ನಾದರೂ ಇತ್ತ ಗಮನ ಹರಿಸಿ ಈ ತೊಂದರೆ ಸರಿಪಡಿಸುತ್ತಾರಾಗಿ ನಂಬಿದ,

ಗ್ರಾಮಸ್ಥರ ಪರವಾಗಿ,

–ಎಸ್.ಎಂ.ಕೃಷ್ಣಮೂರ್ತಿ, ಸೂರಳಿ.

ಕೆ. ಇ.ಬಿ.ಉತ್ತರ

ಹಳೆಯದಾದ ಈ ಟ್ರಾನ್ಸ್‌ಫಾರ್ಮರ್ ಸಿಂಗಲ್ ಫೇಸ್ ಆಗಿರುವುದು ತೊಂದರೆಗೆ ಕಾರಣವೆಂದೂ ಇದನ್ನು ಬದಲಿಸಿ 3-ಫೇಸ್ ಟ್ರಾನ್ಸ್‌ಫಾರ್ಮರ್ ಹಾಕಲು ಎಸ್ಟಿಮೇಟ್ ಮಂಜೂರಾತಿಗೆ ಹೋಗಿದೆಯೆಂದೂ ಈ ವರ್ಷವೇ ಈ ಕೆಲಸ ಆಗುವುದೆಂದು ಕೊಪ್ಪ ವಿದ್ಯುಚ್ಛಕ್ತಿ ಸೆಕ್ಷನ್ ಆಫೀಸರ್ ತಿಳಿಸಿದ್ದಾರೆ.

/ ಇದಲ್ಲದೆ ಬೇರುಕೊಡಿಗೆ ಟ್ರಾನ್ಸ್‌ಫಾರ್ಮರನ್ನೂ ಬದಲಿಸಿ, ಹೊಸದನ್ನು ಎ. ಜಿ. ಕಟ್ಟೆಯಲ್ಲಿ ಅಳವಡಿಸಲಾಗುವುದು ಇದರಿಂದ ಅಲ್ಲಿನ ವಿದ್ಯುಚ್ಛಕ್ತಿ ಪರಿಸ್ಥಿತಿಯೂ ಸುಧಾರಿಸಲಿದೆ ಎಂದೂ ಅವರು ತಿಳಿಸಿದ್ದಾರೆ.

ಜ್ಞಾನಮಂದಿರ, ಯು. ಸಂಘ ಕಟ್ಟಡಗಳು ಶಿಥಿಲ

ಕೊಪ್ಪ ತಾ॥ ಶಾನುವಳ್ಳಿಗೆ ಸಮೀಪದ ಮಾವಿನಕಟ್ಟೆ ಕೈಮರದ ಜ್ಞಾನಮಂದಿರ ಶಿಥಿಲವಾಗಿದ್ದು,ಯಾವಾಗಬೇಕಾದರೂಬಿದ್ದು ಹೋಗುವ ಸ್ಥಿತಿಯಲ್ಲಿದೆ. ಆದರೆ ಅಲ್ಲಿಇನ್ನೂ ಬಾಲವಾಡಿ ನಡೆಯುತ್ತಿದೆ. ಅಧಿಕಾರಿಗಳ ಗಮನಕ್ಕೆ ತಂದರೂ ರಿಪೇರಿಯಾಗಿಲ್ಲ ಎಂದು ಶಾನುವಳ್ಳಿ ಪಂಚಾಯ್ತಿ ಮಾಜಿ ಅಧ್ಯಕ್ಷ ಮೂಗ ಶ್ರೀನಿವಾಸ್ ತಿಳಿಸಿದ್ದಾರೆ.

ಶಾನುವಳ್ಳಿಯ ಮಹಿಳಾ ಸಮಾಜ ಮತ್ತು ಯುವಕ ಸಂಘಗಳ ಕಟ್ಟಡಗಳೂ ಶಿಥಿಲವಾಗಿ ಈ ಮಳೆಗಾಲದಲ್ಲಿ ಬಿದ್ದುಹೋಗುವ ಸ್ಥಿತಿಯಲ್ಲಿವೆ ಎಂದಿರುವ ಶ್ರೀನಿವಾಸ್, ಅಧಿಕಾರಿಗಳು ಕೂಡಲೇ ಈ ಕಡೆ ಗಮನ ಹರಿಸಬೇಕೆಂದು ಆಗ್ರಹಿಸಿದ್ದಾರೆ.

ಮೇಗುಂದಾ ಹೋಬಳಿಯ ಹಲವೆಡೆ

ಮಂಜೂರಾಗಬೇಕಿರುವ ಕೆಲ ಕಾಮಗಾರಿಗಳು

ಅತ್ಯಂತ ದುರ್ಗಮ ಬೆಟ್ಟ–ಗುಡ್ಡದ ದಾರಿಗಳನ್ನುಳ್ಳ ಹಾಗೂ ಮೂಲೆಮೂಲೆಯಲ್ಲಿ ಜನ ವಸತಿಯುಳ್ಳ ಮೇಗುಂದ ಹೋಬಳಿಯ ಹುಲಿಗರಡಿ ಗ್ರಾಮ ಸಹ ಇಂಥದೇ ಸನ್ನಿವೇಶದಿಂದ ಕೂಡಿದೆ. ಅಲ್ಲಿ ಆಗಬೇಕಾಗಿರುವ, ಅಥವಾ ಯೋಜನೆಯು ಮಂಜೂರಾತಿಗೆ ಕಾಯುತ್ತಿರುವ ಕೆಲವು ರಸ್ತೆ ಕಾಮಗಾರಿಗಳ ವಿವರ ಇಲ್ಲಿದೆ:

ಈ ಗ್ರಾಮದ ಜೀವನಾಡಿಯಾದ ಕೂಳೂರು–ಹೆಗ್ಗಾಳುಕೊಡಿಗೆ ಶಾಂತಿಗ್ರಾಮ ಲೋಕೋಪಯೋಗಿ ಇಲಾಖೆ ರಸ್ತೆ ಬಹಳ ಜಖಂಗೊಂಡಿರುವುದಲ್ಲದೆ ಮಧ್ಯೆ ಒಂದೆಡೆ ಸಂಪರ್ಕ ಕಡಿದಿದ್ದು, ಇದರ ಸಮಗ್ರ ಸುಧಾರಣೆಗಾಗಿ 2 ಲಕ್ಷ ರೂ. ನ ಎಸ್ಟಿಮೇಟ್ ಮಂಜೂರಾತಿಗೆ ಕಳಿಸಲಾಗಿದೆ. ಈ ವರ್ಷ ಬಜೆಟ್‌ನಲ್ಲಿ ಸೇರಿಸಿದರೆ ಮಾತ್ರ ಯೋಜನೆ ಮಂಜೂರಾಗುತ್ತದೆ.

ಜಯಪುರ–ಬಾಳೆಹೊಳೆ ರಸ್ತೆಯ 5 ನೇ ಕಿ. ಮೀ.ನಿಂದ ಅರಳಿಕಟ್ಟೆ ಮಾರ್ಗವಾಗಿ ಹುಲಿಗರಡಿ ಸೇರುವಂತೆ 'ಗಿರಿಜನ ಅಭಿವೃದ್ಧಿ ರಸ್ತೆ' ಯೊಂದಕ್ಕೆ ಯೋಜನೆ ತಯಾರಿಸಿ ಚಿಕ್ಕಮಗಳೂರಿನ ಗಿರಿಜನ ಅಭಿವೃದ್ಧಿ ಅಧಿಕಾರಿಗೆಹೋಗಿದೆ. ಅದರಲ್ಲಿ ಒಂದು ಸೇತುವೆ ಸಹ ಸೇರಿದ್ದು, ಮಂಜೂರಾತಿ ಇನ್ನೂ ಬರಬೇಕಾಗಿದೆ.

ಹುಲಿಗೆರಡಿ ಗ್ರಾಮದಿಂದ ಅಗಳಗಂಡಿಗೆ ಗ್ರಾಮಸ್ಥರೇ ಕಷ್ಟಪಟ್ಟು ಒಂದು ಸಂಪರ್ಕ ರಸ್ತೆ ಮಾಡಿದ್ದಾರೆ. ಇದರಲ್ಲಿ ಒಂದು ಮೋರಿ ಆಗಬೇಕಾಗಿದೆ. ಈ ರಸ್ತೆಯನ್ನು ತಾ.ಅ. ಮಂಡಳಿಗಾದರೂ ಸೇರಿಸಿಕೊಂಡು ದುರಸ್ತಿ ಮಾಡಿ ನಿರ್ವಹಿಸುವ ರಸ್ತೆ ಮಾಡಬೇಕು.

ಅಕ್ರಮ ?

ಕೂಳೂರು–ಹುಲಿಗರಡಿ ರಸ್ತೆಯಲ್ಲಿ ಪ್ರಾರಂಭದ ಸುಮಾರು 1 ಕಿ. ಮೀ. ದೂರ ಈಗ್ಗೆರಡು ವರ್ಷಗಳ ಹಿಂದೆ ಜಲ್ಲಿ ಆಗಿತ್ತು. ಕಳೆದ ವರ್ಷ ಮಧ್ಯೆ ಒಂದು ಕಿ.ಮೀ. ಬಿಟ್ಟು ಮುಂದಿನ ಒಂದು ಕಿ.ಮೀ. ರಸ್ತೆಗೆ ಜಲ್ಲಿ ಆಯಿತು. ಮಧ್ಯೆ ಬಿಟ್ಟಿರುವ 1 ಕಿ. ಮೀ ರಸ್ತೆ ತುರ್ತಾಗಿ ಜಲ್ಲಿ ಆಗಲೇ ಬೇಕಾಗಿದ್ದು, ತುಂಬ ಕೊರಕಲಾಗಿರುವ ಇಳಿಜಾರು ಜಾಗ. ಈ ಜಾಗ ಬಿಟ್ಟು ಮುಂದಿನ ಜಾಗಕ್ಕೆ ಜಲ್ಲಿ ಹಾಕಿರುವ ಬಗ್ಗೆ ಗ್ರಾಮಸ್ಥರಿಗೆ ಏನೋ ಅಕ್ರಮದ ಸಂದೇಹವಿದೆ. ಆ ಜಾಗವೇ ಅತ್ಯಂತ ಕಷ್ಟಕರವಾಗಿತ್ತೆಂದು ಜೂ॥ ಇಂಜಿನಿಯರ್ ಹೇಳುತ್ತಾರಾದರೂ ಅದು ಅಷ್ಟು ನಂಬಲರ್ಹವೆಂದು ಕಂಡುಬರುವುದಿಲ್ಲ. ಅಂತೂ ಈ ಭಾಗಕ್ಕೂ ಜಲ್ಲಿ ಹಾಕುವ ಬಗ್ಗೆ ಎಸ್ಟಿಮೇಟ್ಸ್ ಹೋಗಿದೆಯೆಂದೂ ಜೂ॥ಇಂ॥ ತಿಳಿಸಿದ್ದಾರೆ.

ಇದಲ್ಲದೆ, ಜಯಪುರ–ಬಸರಿಕಟ್ಟೆ ರಸ್ತೆಯಲ್ಲಿ 16.2 ರಿಂದ 17.4 ನೇ ಕಿ. ಮೀ. ವರೆಗೆ ಬಾಕಿಯಿರುವಲ್ಲಿಗೆ ಟಾರು ಹಾಕುವುದಕ್ಕೆ ಹಾಗೂ ಬಸರಿಕಟ್ಟೆ ಶಾಲೆಯ ಬಳಿ ಮತ್ತು ಬಿಳಲುಕೊಪ್ಪ ಗ್ರಾಮದಿಂದ ಮೇಗರಮಕ್ಕಿ ಮಠದ ಟಾರು ಹಾಕುವುದಕ್ಕೆ ಒಟ್ಟಿಗೆ ಎಸ್ಟಿಮೇಟ್ ಚೀಫ್ ಇಂಜಿನಿಯರ್ ಆಫೀಸಿನವರೆಗೆ ಹೋಗಿದ್ದು, ಬಜೆಟ್‌ನಲ್ಲಿ ಸೇರಿಸಬೇಕಾಗಿದೆ.

(4ನೇ ಪುಟಕ್ಕೆ)

"ಹುಲಿ ಹಾವಳಿಯಿಂದ ರೈತರಿಗೆ ರಕ್ಷಣೆ ಸಿಗಲೇಬೇಕು"

(2ನೇ ಪುಟದಿಂದ)

'ಒಂದೆಡೆಯಿಂದ ಹುಲಿಗಳು ವಾಸ ಮಾಡಬಹುದಾದ ದಟ್ಟ ಕಾಡುಗಳ ವ್ಯಾಪಕ ನಾಶ. ಇದ್ದ ಬದ್ದ ಕಾಡಿನಲ್ಲೂ ಅವುಗಳ ಆಹಾರದ ಇತರ ಪ್ರಾಣಿಗಳ ಬೇಟೆ. ಇವುಗಳಿಂದಾಗಿ ಹುಲಿಗಳು ಊರುಗಳ ಕಡೆ ಬರುವುದು ಅನಿವಾರ್ಯವಾಗುತ್ತಿದೆ. ಇಲ್ಲವಾದರೆ ಹುಲಿ ರಾಜಾ ಪ್ರಾಣಿ. ಹಾಗೆಲ್ಲ ಹಳ್ಳಿಗಳಿಗೆ ಬಂದು ತೊಂದರೆ ಕೊಡುವ 'ಚಿಲ್ಲರೆ' ಜಾಯಮಾನದ್ದಲ್ಲ. ಆದ್ದರಿಂದ ಕಾಡಿನ ನಾಶವನ್ನು ತಡೆಗಟ್ಟಿ ಮತ್ತು ಬೇಟೆಯಾಡುವುದನ್ನು ಪೂರ್ತಿಯಾಗಿ ನಿಲ್ಲಿಸಿ' ಎಂದು ಅರಣ್ಯಾಧಿಕಾರಿಗಳು ಹೇಳುತ್ತಾರೆ.ರೈತರು ಸೊಪ್ಪು-ಸೌದೆಗಳಿಗಾಗಿ ಕಾಡಿಗೆ ಹೋಗುವುದು ಮತ್ತು ಹೊಸದಾಗಿ ಜಮೀನು ಮಾಡಲು ಕಾಡು ಕಡಿಯುವುದು—ಇವೇ ಕಾಡು ನಾಶವಾಗುತ್ತಿರುವುದಕ್ಕೆ ಕಾರಣವೆಂದು ಅವರ ಅಭಿಪ್ರಾಯ.

'ಹೀಗೆ ಸತತವಾದ ಸ್ವ–ಸಂಯಮದ ಆಂದೋಲನದಿಂದ ಮಾತ್ರ ಹುಲಿ ಮತ್ತು ಇತರ ಕಾಡು ಪ್ರಾಣಿಗಳ ಉಪಟಳ ತಪ್ಪಿಸಬೇಕೇ ಹೊರತು ಒಂದೋ ಎರಡೋ ಹುಲಿಯನ್ನು ಹಿಡಿಯುವುದರಿಂದ ಅದರ ಬಾಧೆ ಪರಿಹಾರವಾಗದು. ಆದರ ಸ್ಥಾನಕ್ಕೆ ನೆರೆಯ ಪ್ರದೇಶದಿಂದ ಇನ್ನೊಂದು ಹುಲಿ ಬಂದು ಸೇರುತ್ತದೆ ಅಷ್ಟೆ. ಅಷ್ಟು ಮಾಡಿ ಹುಲಿಗಳನ್ನು ನಿವಾರಿಸಿದರೆ ಕಾಡು ಹಂದಿ ಮತ್ತಿತರ ಪ್ರಾಣಿಗಳ ಹಾವಳಿ ತಡೆಯಲಸಾಧ್ಯವಾಗುತ್ತದೆ' ಎಂದು ಅವರು ಹೇಳುತ್ತಾರೆ.

ವಾಸ್ತವನಾಗಿ, ಕಾಡಿನ ನಾಶಕ್ಕೆ ಹಳ್ಳಿಗರಿಗಿಂತ ಹೆಚ್ಚಾಗಿ, ಕಾಡಿನ ಸಂರಕ್ಷಣೆ ಮತ್ತು ಅಭಿವೃದ್ಧಿಯ ಕರ್ತವ್ಯಹೊತ್ತ ಅರಣ್ಯ ಇಲಾಖೆಯ ವೈಫಲ್ಯವೇ ಮುಖ್ಯ ಕಾರಣ ಎಂಬುದು ಈಗ ಚಿಕ್ಕಮಗುವಿಗೂ ತಿಳಿದಿರುವ ಸತ್ಯ. ದೊಡ್ಡ ಕಂಪನಿಗಳಿಗೆ ಕಾಡಿನ 'ಕೆಲವು' ಜಾತಿಯ ಮರಗಳನ್ನು ಕಡಿಯಲು ಪರವಾನಗಿ ಕೊಟ್ಟು ಅವರು ಇಲಾಖೆಯ ಪ್ರತಿ ಹಂತದಲ್ಲೂ ಕೊಡಬೇಕಾದ ಲಂಚವನ್ನು ತುಂಬಲು ಮತ್ತು ತನ್ನ ಮಿತಿ ಮೀರಿದ ಲಾಭದಾಸೆಗೆ ಯದ್ವಾ ತದ್ವಾ ಕಾಡು ಕಡಿದುದು–ಕಡಿಯುತ್ತಿರುವುದು; ಕಳ್ಳ ನಾಟಾ ದವರಿಂದ ಕಾಡು ನಾಶ; ನೀಲಗಿರಿ, ಸಾಗುವಾನಿ,ಮುಂತಾದ ಯಾರಿಗೋಲಾಭ ತರುವ ಸಸ್ಯಗಳನ್ನು ಬೆಳೆಸಲು ಹಿಂದೆ ಕಾಡುಗಳನ್ನು ಕಡಿದುದು, ಮುಂತಾಗಿ ಹೆಜ್ಜೆ ಹೆಜ್ಜೆಗೂ ಅರಣ್ಯ ಇಲಾಖೆಯ ವೈಫಲ್ಯ ಮತ್ತು ಭ್ರಷ್ಟತೆ ಕಣ್ಣು ಕುಕ್ಕುತ್ತವೆ. ಜೊತೆಗೆ ದೊಡ್ಡ ದೊಡ್ಡ ಕಾಫಿತೋಟಗಳಿಗಾಗಿ ದಟ್ಟ ಕಾಡುಗಳನ್ನು ಕಡಿಯಲು ಬಿಟ್ಟ ಭ್ರಷ್ಟತೆ.

ಎಷ್ಟೋ ವೇಳೆ ಹಳ್ಳಿಗರೇ ಕಾಡುಗಳನ್ನ ಸಂರಕ್ಷಿಸಲು ಯತ್ನಿಸಿದಾಗಲೂ ಇದೇ ಅರಣ್ಯ ಇಲಾಖೆಯವರು ಜನರನ್ನು ಹೆದರಿಸಿಯೋ ಮೋಸಗೊಳಿಸಿಯೋ ಅಂಥ ಯತ್ನಗಳನ್ನು ಅಸಾಧ್ಯವಾಗಿಸಿರುವುದೂ ಈ ಭಾಗದ ಹಲವು ರೈತರ ಸ್ವಂತ ಅನುಭವದಲ್ಲೇ ಇದೆ.

ಹೀಗಿರುವಾಗ, ಮತ್ತೂ ರೈತರಿಗೇ "ಕಾಡು ನಾಶ ಮಾಡಬೇಡಿ...." ಎಂದು ಪೊಳ್ಳು ಮಾತು ಹೇಳಿದರೆ ಅದಕ್ಕೆ ರೈತರು ಏನೂ ಮಾಡುವಂತಿಲ್ಲ. ಅಂದರೆ ರೈತರು ಅರಣ್ಯ ನಾಶ ಮಾಡುವುದಿಲ್ಲವೆಂದಲ್ಲ. ಹಿಗ್ಗಾಮುಗ್ಗಾ ಸೌದೆ ಬಳಕೆಯಿಂದ ಹಿಂದೆ ಬಹಳ ಕಡೆ ಕಾಡು ಹಾಳು ಮಾಡಿದ್ದಾರೆ. ಆದರೆ ಈಗ ಬಹಳ ಕಡೆ ಬದಲಿ ಕ್ರಮಗಳ ಮೂಲಕ ಕಾಡಿನ ಅವಲಂಬನೆ ಕಡಿಮೆ ಮಾಡುತ್ತಿದ್ದಾರೆ. ಅಲ್ಲದೆ, ಕಾಡಿನ ರಕ್ಷಣೆಯಲ್ಲಿ ರೈತರಿಗೆ ಮೆಲ್ಪಂಕ್ತಿಯಾಗಬೇಕಿದ್ದ ಅರಣ್ಯ ಇಲಾಖೆಯೇ ಮುಖ್ಯ ಅಪರಾಧಿಯಾಗಿ ಎದ್ದು ಕಾಣುತ್ತದೆ.

ಈಗ ಇದಕ್ಕಿಂತ ತುರ್ತಿನ ಪ್ರಸ್ತುತದ ಪ್ರಶ್ನೆ ರೈತರ ಅಳಿವು-ಉಳಿವಿನದಾಗಿದೆ. ಈಗಾಗಲೇ ಹಳ್ಳಿಗಳಲ್ಲಿ ನೆಲೆಸಿರುವ ರೈತರು ಉಳಿಯಬೇಕಾದರೆ ಈ ಹುಲಿಗಳಿಂದ ಏನಾದರೂ ರಕ್ಷಣೆ ದೊರೆಯಲೇ ಬೇಕಾಗಿದೆ. ಅದನ್ನು ಹೇಗೆ ಮಾಡಬಹುದು ಎಂಬುದನ್ನು ಸಂರಕ್ಷಕರೇ ಕಂಡು ಹುಡುಕಬೇಕು. ಈಗಲಾದರೂ ಈ ಹಳೆಯ ಅಪರಾಧಿ ಇಲಾಖೆ ಸ್ವಲ್ಪ ವಾಸ್ತವ ಪ್ರಜ್ಞೆಯಿಂದ ತನ್ನ ಕರ್ತವ್ಯ ನಿರ್ವಹಿಸಬೇಕಾಗಿದೆ—ತುರ್ತಾಗಿ.

॥ ಓಂ ಶ್ರೀ ಮಂಜುನಾಥಾಯ ನಮಃ ॥

ಉಚಿತ ಸಾಮೂಹಿಕ ವಿವಾಹ

ಶ್ರೀ ಕ್ಷೇತ್ರ ಧರ್ಮಸ್ಥಳ - 574216.

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಪ್ರತಿ ವರ್ಷದಂತೆ ನೆರವೇರುವ ಸಾಮೂಹಿಕ ವಿವಾಹವು ತಾ॥ 10–5–1985ನೇ ಶುಕ್ರವಾರ ಸಾಯಂಕಾಲ ಘಂಟೆ 6–40ಕ್ಕೆ ಸಲ್ಲುವ ಗೋಧೂಳಿ ಲಗ್ನದಲ್ಲಿ ಜರುಗಲಿರುವುದು.

ಈ ಸಾಮೂಹಿಕ ವಿವಾಹ ಸಮಾರಂಭದಲ್ಲಿ ವಿವಾಹವಾಗಬಿಚ್ಛಿಸುವವರು ತಾ॥ 5–5–1985ರೊಳಗಾಗಿ ವಧೂವರರ ಹೆಸರು ದಾಖಲು ಮಾಡಿಸುವುದು. ಬಯಿತ್ತಾ ಗ್ರಾಮ ಪಂಚಾಯ್ತಿಯ ಅಧ್ಯಕ್ಷರು ಯಾ ಕಾರ್ಯದರ್ಶಿಯಿಂದ ವಧೂವರರ ಹೆಸರು, ಪ್ರಾಯ, ಹಿರಿಯರ ಅನುಮತಿ ಹಾಗೂ ಅವಿವಾಹಿತರೆಂಬುದಕ್ಕೆ ಅವಶ್ಯಕ ದೃಢಪತ್ರಿಕೆ ತರಬೇಕು.

ವರನಿಗೆ ಧೋತಿ, ಶಾಲು, ವಧುವಿಗೆ ಸೀರೆ, ರವಿಕೆ ಕಣ ಮತ್ತು ಮಂಗಳ ಸೂತ್ರವನ್ನು ಕೊಡಲಾಗುವುದು. ಎರಡೂ ಕಡೆಯಿಂದ ಒಟ್ಟು 10 ಜನ ಬರಬಹುದು ಹೆಚ್ಚಿನ ಮಾಹಿತಿಗಳನ್ನು ಸಾಮೂಹಿಕ ವಿವಾಹ ಮಾಹಿತಿ ಕಛೇರಿಯಲ್ಲಿ ಕೇಳಿ ತಿಳಿದು ಕೊಳ್ಳುವುದು.

ವಿ.ಸೂ:– ಯಾವುದೇ ಸಂದರ್ಭದಲ್ಲೂ 2ನೇ ಮದುವೆಗೆ ಅವಕಾಶವಿಲ್ಲ.

ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು,

ಶ್ರೀ ಕ್ಷೇತ್ರ ಧರ್ಮಸ್ಥಳ.

...ನ್ನ-ಲೋಕನಾಥಪುರ ಮಧ್ಯೆ ಸೇತುವೆ ಮಂಜೂರಾಗಿಲ್ಲ

ನಮ್ಮ 14-4-1985ರ ಸಂಚಿಕೆಯ ..ವರಪೇಗತಿ' ವರದಿಗೆ ಪ್ರತಿಕ್ರಿಯಿಸಿರುವ ಲೋ!!ಇಲಾಖೆ ಕೊಪ್ಪ ಅ!! ಎ!! ಇಂಜಿನಿಯರ್ ಚಿನ್ನಪ್ಪ ಹೆಗ್ಡೆ ಅವರು,ಲೋಕನಾಥಪುರ ..ಹೆದ್ದೆ ಮಧ್ಯೆ ಯಾವ ಸೇತುವೆಯೂ ಮಂಜೂರಾಗಿಲ್ಲ. ಇಲ್ಲಿ ಸೀತಾನದಿಗೆ ಹಿಂದೆ 2ಸಲ ಕಟ್ಟಿದ್ದ ಕಾಲುಸೇತುವೆಗಳು ನೆರೆಯಲ್ಲಿ ಕೊಚ್ಚಿಹೋಗಿವೆ.ಅಲ್ಲಿಗೆ ಆರೇಳು ಲಕ್ಷ ರೂ. ವೆಚ್ಚದ ಸರಿಯಾದ ಸೇತುವೆಯೇ ಬೇಕಾಗುತ್ತದೆ. ಅಂಥ ಸೇತುವೆಯ ಎಸ್ಟಿಮೇಟ್ ಸದ್ಯಕ್ಕೆ ಯಾವುದೂ ಇಲ್ಲ. ಉತ್ತಮೇಶ್ವರದ ಹತ್ತಿರ ವರಗನಹಳ್ಳಿಕ್ಕೆ ಮಂಜೂರಾಗಿರುವ ಸೇತುವೆಯೇ (..ದೂವರೆ ಲಕ್ಷ ರೂ. ವೆಚ್ಚದ್ದು; ಹಿಂದೆ ವರದಿಯಾದಂತೆ 3 ಲಕ್ಷ ರೂ. ಅಲ್ಲ.-) ಆ ಭಾಗದ ಜನರಿಗೆ ಮಳೆಗಾಲದ ಸಂಪರ್ಕ ಮಾರ್ಗವಾಗಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

ಶೃಂಗೇರಿ ತಾ!! ಜನತಾಕ್ಕೆ ಹೊಸ ಅಧ್ಯಕ್ಷರು

(ಬ್ರಾಹ್ಮಣ ಸಮೂಹದಿಂದ ಪದಾಧಿಕಾರ ನಿರಾಕರಣೆ)

(ನಮ್ಮ ಪ್ರತಿನಿಧಿಯಿಂದ)

ಚುನಾವಣೆಗೆ ಮುನ್ನ ಕೆ.ಆರ್.ದೇವೇಂದ್ರ ಹೆಗ್ಡೆ ಕಾಂಗ್ರೆ ಸೇರಿದ್ದರಿಂದ ಶೃಂಗೇರಿ ತಾ!! ಜನತಾಕ್ಕೆ ಹೊಸ ಅಧ್ಯಕ್ಷರ ಆಯ್ಕೆ ಅಗಬೇಕಾಗಿದ್ದು,ಅದು ಸರ್ವಾನುಮತದಿಂದ ಆಗಲು ತೊಡಕಾಯಿತು. ಅಧ್ಯಕ್ಷ ಪದವಿ ಬ್ರಾಹ್ಮಣ ('ಅಲ್ಪ ಸಂಖ್ಯಾತ')ರಿಗೆ ನೀಡಬೇಕೆಂಬ ಎಲ್ ಎಸ್. ಚಂದ್ರಶೇಖರ್‌ರವರ ಪಟ್ಟು ಸಡಿಲವಾಗಿ, ಕೊನೆಯಲ್ಲಿ, ಹಿಂದಿನ ಕಾರ್ಯದರ್ಶಿ ಕಚ್ಚೋಡಿ ಶ್ರೀನಿವಾಸ್‌ರನ್ನೇ ಅಧ್ಯಕ್ಷರಾಗಿ ಮಾಡಲಾಯಿತು. ಇದರಿಂದಾಗಿ ಬ್ರಾಹ್ಮಣ ಸಮೂಹದವರು ಜನತಾ ಪಕ್ಷದ ಯಾವುದೇ ಪದವಿಯನ್ನು ವಹಿಸಿಕೊಳ್ಳುವುದಿಲ್ಲವೆಂದೂ ಆದರೆ ಜನತಾ ಪಕ್ಷಕ್ಕೆ ಬೆಂಬಲವಿದೆಯೆಂದೂ ತಿಳಿಸಿದರು.

ಕ್ಷೇತ್ರದಶಾಸಕರು ಮಂತ್ರಿಗಳೂ ಆಗಿರುವುದರಿಂದ ತಾ!!ಅಧ್ಯಕ್ಷರ ಅಧಿಕಾರ ಆಕಿಯಾಗಿ ಹೆಚ್ಚಿರುವುದು ಪೈಪೋಟಿಗೆ ಸ್ವಲ್ಪ ಮಟ್ಟಿಗೆ ಕಾರಣವೆಂದುಪಕ್ಷದಮೂಲಗಳುತಿಳಿಸಿವೆ.

ಶೃಂಗೇರಿ, ಕೊಪ್ಪ,ತೀರ್ಥಹಳ್ಳಿ ಉಪಮಾರುಕಟ್ಟೆ ಅಭಿವೃದ್ಧಿಗೆ ತಲಾ 10 ಲಕ್ಷ ರೂ.

ಶಿವಮೊಗ್ಗ:ಇಲ್ಲಿನ ವ್ಯವಸಾಯೋತ್ಪನ್ನಗಳ ಮಾರುಕಟ್ಟೆ ಸಮಿತಿ ಶೃಂಗೇರಿ,ಕೊಪ್ಪ, ತೀರ್ಥಹಳ್ಳಿಉಪಮಾರುಕಟ್ಟೆಗಳ ಅಭಿವೃದ್ಧಿಗೆ ತಲಾ 10 ಲಕ್ಷ ರೂ. ಗಳ ಯೋಜನೆ ರೂಪಿಸಿದೆ. ಈ ಮೂರೂ ಉಪಮಾರುಕಟ್ಟೆಗಳಲ್ಲಿ ಉಗ್ರಾಣಗಳು, ರಸ್ತೆ, ನೀರಿನಸೌಲಭ್ಯ, ಹರಾಜು ಕಟ್ಟೆ-ಮತ್ತಿತರ ಸೌಲಭ್ಯಗಳನ್ನು ಒದಗಿಸಲಾಗುವುದು.

ಈ ವಿಚಾರ ತಿಳಿಸಿರುವ ಸಮಿತಿ ಅಧ್ಯಕ್ಷ ಕೆ. ಎಸ್. ವೀರಪ್ಪ ಗೌಡರು, ಗ್ರಾಮೀಣ ಮಾರುಕಟ್ಟೆಗಳ (ಸಂತೆಗಳ) ಅಭಿವೃದ್ಧಿ ಯೋಜನೆಯಡಿ ಜಯಪುರ,ಉಂಬಳೆಬೈಲು, ಹೊಳಲೂರು ಮತ್ತುಕೋಣಂದೂರುಗಳಲ್ಲಿ ಮಾರುಕಟ್ಟೆ ಅಭಿವೃದ್ಧಿ ಪಡಿಸಲು ಯೋಜನೆ ತಯಾರಿಸಿ ಸರ್ಕಾರದ ಮಂಜೂರಾತಿಗಾಗಿ ಕಳಿಸಲಾಗಿದೆಯೆಂದಿದ್ದಾರೆ.

ವ್ಯ. ಮಾ. ಸ. ಮಾರುಕಟ್ಟೆಗೆ ಬಂದು ಹೋಗುವವರಿಗಾಗಿ ಶಿವಮೊಗ್ಗ ಬಸ್‌ನಿಲ್ದಾಣದಿಂದ ಮಾರುಕಟ್ಟೆಗೆ ಮೆಟಡೋರ್‌ವ್ಯಾನ್ ಓಡಿಸುವ ಸೌಲಭ್ಯ ಶೀಘ್ರದಲ್ಲೇ ಒದಗಲಿದೆ.

ವೇದ ಶಿಕ್ಷಾ ವರ್ಗ ಆರಂಭ

ಹರಿಹರಪುರ: ಇಲ್ಲಿನ ವೇದ ಶಿಕ್ಷಣ ಬಳಗದ ಆಶ್ರಯದ ವೇದ ಶಿಕ್ಷಾ ವರ್ಗದ ಉದ್ಘಾಟನೆ ಏ 14ರಂದು ಹರಿಹರಪುರ ಮಠಾಧಿಶರಿಂದ ನೆರವೇರಿತು. ಅಖಿಲ ಭಾರತ ಕೃಷಿಕ ಸಮಾಜದ ಅಧ್ಯಕ್ಷ ಪುರುಷೋತ್ತಮರಾವ್ ಅಧ್ಯಕ್ಷತೆ ವಹಿಸಿದ್ದು, ಕೊಪ್ಪ ಪೋಲೀಸ್ ಸಬ್ ಇನ್ಸೆಕ್ಟರ್ ಶಶಿಕುಮಾರ್ ಮುಖ್ಯ ಅತಿಥಿಯಾಗಿದ್ದರು. ದಕ್ಷಿಣಾಮೂರ್ತಿ ಸ್ವಾಗತಿಸಿದರು. ಶಿಬಿರದ ಆಚಾರ್ಯ ಎಸ್.ಟಿ.ನಾಗರಾಜ್ ಶಿಬಿರದ ಪರಿಚಯ ನೀಡಿದರು. ರಾಮಮೋಹನ್ ವಂದಿಸಿದರು. ಐಕ್ಯಮಂತ್ರದೊಂದಿಗೆ ಸಭೆ ಕೊನೆಗೊಂಡಿತು. 20 ದಿನ ನಡೆಯುವ ಈ ಶಿಬಿರದಲ್ಲಿ ಭಾಗವಹಿಸುತ್ತಿರುವ ವಿವಿಧ ಜಿಲ್ಲೆಗಳ 30 ಜನ ಶಿಕ್ಷಾರ್ಥಿಗಳಿಗೆ ಉಚಿತ ಶಿಕ್ಷಣ, ಊಟ, ವಸತಿ ನೀಡಲಾಗುತ್ತಿದೆ.

ನಿಲುವಾಗಿಲು ದೊಡ್ಡಿಗೆ ಒಂದು ಗಾಡಿಯೆತ್ತು ಬಂದಿದೆ

ತಾ!! 10-4-85ರಲ್ಲಿ ನಿಲುವಾಗಿಲು ದೊಡ್ಡಿಗೆ ಒಂದು ಗಾಡಿಯೆತ್ತನ್ನು ತಂದು ಕಟ್ಟಿದ್ದಾರೆ. ಕಪ್ಪು ಬಣ್ಣ, ಗರುಡ ಮುಖ, ನೆಟ್ಟಗೆ ಕೋಡು ಇದೆ. ಇನ್ನು 2-3 ದಿನದಲ್ಲಿ ಹರಾಜು ಆಗುವ ನಿರೀಕ್ಷೆ ಇದೆ. ಕಳೆದುಕೊಂಡವರು ಇದನ್ನು ಸೂಕ್ತ ರೀತಿಯಲ್ಲಿ ಪಡೆದುಕೊಳ್ಳಲೆಂದು ಈ ಪ್ರಕಟಣೆ ಹಾಕಿಸಿದ್ದೇನೆ.

ಕೆ.ಜಿ.ಆಚಾರ್, ನಿಲುವಾಗಿಲು

ಮಂಜೂರಾಗಬೇಕಿರುವ ಕಾಮಗಾರಿಗಳು

(3ನೇ ಪುಟದಿಂದ)

ಮಳೆ ಹಾನಿ

ಮಳೆಯಿಂದಾಗುವ ಹಾನಿಯ ದುರಸ್ತಿಗಾಗಿ ಒದಗಿಸುವ ಹಣ ಮೇಗುಂದಾಹೋಬಳಿಯ ಹಲವೆಡೆ ಮಂಜೂರಾಗಬೇಕಾಗಿದೆ. (ಹೆಗ್ಗಾರುಕೊಡಿಗೆ ಬಳಿ ಧರೆ ಜರಿದು ಭಯಂಕರವಾದ ಪ್ರಪಾತವುಂಟಾಗಿದೆ.ಇಂಥ ಹಲವು ಮಳೆ ಅನಾಹುತಗಳು ಹೋಬಳಿಯಲ್ಲಿವೆ) ಆದರೆ ಈ ಹಣನಮ್ಮ ಜಿಲ್ಲೆಗೇ ಮಂಜೂರಾಗುತ್ತಿಲ್ಲವೆನ್ನಲಾಗಿದ್ದು, ಇದು ಮಂತ್ರಿ ಗೋವಿಂದ ಗೌಡರ ಗಮನಕ್ಕೂ ಬಂದಿರುವುದಾಗಿ ಗೊತ್ತಾಗಿದೆ.

ಅ ಸ ಮಾ ಧಾ ನ

ಕಳೆದ ವರ್ಷ ಕೊಗ್ರೆ ಹಳ್ಳಕ್ಕೆ ಮಂಜೂರಾದ ಸೇತುವೆ ಬಗ್ಗೆ ಆ ಭಾಗದಲ್ಲಿ ವ್ಯಾಪಕವಾದ ಅಸಮಾಧಾನ ಇನ್ನೂ ಹಸಿಯಾಗಿದೆ. ಆ ಸೇತುವೆಯ ಮೂಲಕ ಬರ್ಕನಘಟ್ಟ ಹರಿಜನ ವಸತಿಯ ಮಾರ್ಗವಾಗಿ ಬಸರಿಕಟ್ಟೆಗೆ ರಸ್ತೆ ಸಂಪರ್ಕವನ್ನು ದಾಖಲೆಗಳಲ್ಲಿ ತೋರಿಸಲಾಗಿದೆಯಾದರೂ ಇಂಥ ರಸ್ತೆ ಈಗ ಇಲ್ಲ, ಮುಂದೆ ಕಾರ್ಯಸಾಧ್ಯವೆಂದೂ ಕಾಣುವುದಿಲ್ಲ. ಬರ್ಕನಘಟ್ಟಕ್ಕೆ ಬಸರಿಕಟ್ಟೆಯಿಂದ ಸರಿಯಾದ ರಸ್ತೆ ಈಗಾಗಲೇ ಇದೆ. ಈ ಸೇತುವೆ ಕೇವಲ ನಾಲ್ಕಾರು ಮನೆಗಳವರಿಗೆ ಮಾತ್ರ ಪ್ರಯೋಜನಕರ-ಆದರಲ್ಲೂ ಮುಖ್ಯವಾಗಿ ಅಲ್ಲಿನ ಒಬ್ಬ ಪ್ರಭಾವಿ ಶ್ರೀಮಂತರ ಮನೆಗೆಂದೇ ಉದ್ದೇಶ ಪಟ್ಟದ್ದು ಎಂದು ಸುತ್ತಮುತ್ತಲ ಜನ ಒಕ್ಕೊರಲಿನಿಂದ ಹೇಳುತ್ತಾರೆ.

ಆದರೆ ಬದಲು ಕೋಟೆತೋಟ ಹಳ್ಳಕ್ಕೆ ಸೇತುವೆ ಆಗಿದ್ದರೆ ಇತ್ತ ಕಲ್ಲುಗುಡ್ಡೆ, ಮೆಣಸಿನಹಾಡ್ಯ,ಬೆಂಡೆಹೆಕ್ಲು ಕಡೆಗೆ,ಅತ್ತ ಮೇಗೂರು,ಹರಳಾನೆ,ಭೈರೇದೇವರು ಕಡೆಗೆ—ಹೀಗೆ 2 ದಿಕ್ಕಿಗೆ ಸಂಪರ್ಕವುಂಟಾಗಿ ಅಸಂಖ್ಯ ಹಳ್ಳಿಗಳಿಗೆ ಪ್ರಯೋಜನವಾಗುತ್ತಿತ್ತು. ಯಾವ ಕಾರಣಕ್ಕೂ ಕೊಗ್ರೆಹಳ್ಳದ ಸೇತುವೆ ಈ ಸೇತುವೆಗಿಂತ ಹೆಚ್ಚಿನ ಆದ್ಯತೆ ಪಡೆಯಲು ಸಾಧ್ಯವಿಲ್ಲ ಎಂದು ಜನ ಬಹಳ ಕೋಪಗೊಂಡಿದ್ದಾರೆ.

ಅಂತೂ ಈ ವರ್ಷವಾದರೂ ಕೋಟೆತೋಟ ಹಳ್ಳಕ್ಕೆ ಸೇತುವೆ ಮಂಜೂರು ಮಾಡಿಸಲು ಗೋವಿಂದ ಗೌಡರು ಪ್ರಯತ್ನಿಸುತ್ತಿರುವಂತಿದೆ.

ರಸಗೊಬ್ಬರಗಳ ಕುರಿತು ವಿಚಾರ ಸಂಕಿರಣ

ಬಿಳಾಲುಕೊಪ್ಪ: ಇಲ್ಲಿನ ವ್ಯವಸಾಯ ಸೇವಾ ಸಹಕಾರ ಸಂಘ, ಕೃಷಿ ವಿಚಾರ ವಿನಿಮಯ ಕೇಂದ್ರ, 'ಇಫ್ಕೊ' ರಸಗೊಬ್ಬರ ಸಂಸ್ಥೆ- ಇವುಗಳ ಸಂಯುಕ್ತ ಆಶ್ರಯದಲ್ಲಿ ಏ. 11ರಂದು ಇಲ್ಲಿ ರಸ ಗೊಬ್ಬರಗಳನ್ನು ಕುರಿತ ವಿಚಾರ ಸಂಕಿರಣವೊಂದು ಬಿ.ಆರ್. ವಿಷ್ಣುಮೂರ್ತಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಇಫ್ಕೊ ಸಂಸ್ಥೆಯ ಕೆ. ಸಿ. ಶಾಂತಯ್ಯ ಮತ್ತು ರಘು ತಜ್ಞ ಉಪನ್ಯಾಸ ನೀಡಿದರು. ಬಸರಿಕಟ್ಟೆ ಸಿಂಡಿಕೇಟ್ ಬ್ಯಾಂಕಿನ ಮ್ಯಾನೇಜರ್ ಧನಂಜಯ ಮತ್ತು ಗ್ರಾ.ಅ. ಅಧಿಕಾರಿ ಜಗದೀಶ್ ಗಚ್ಚಿನಮಠ ಮುಖ್ಯ ಅತಿಥಿಗಳಾಗಿದ್ದರು. ಬಿ.ಎ.ಭಾಸ್ಕರ್ ಸ್ವಾಗತಿಸಿ, ...ಎ.ಎಲ್.ನಾಗಭೂಷಣ್ ವಂದಿಸಿದರು.

ಕ. ಸಾ. ಸಮ್ಮೇಳನದಲ್ಲಿ 'ಗಿರಿ ಸೌರಭ' ಬಿಡುಗಡೆ

ಗುಡ್ಡೇತೋಟ: ಇಲ್ಲಿನ ಶ್ರೀ ವಿನಾಯಕ ಪ್ರಕಾಶನದ ಎಂ. ವಿ. ಗಂಗಾಧರ್ ಸಂಪಾದಿಸಿ ಪ್ರಕಟಿಸಿರುವ, ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ವಾಚಿಸಲಾದ ಕವನಗಳ ಸಂಗ್ರಹ 'ಗಿರಿ ಸೌರಭ'ವನ್ನು ಬೀದರ್‌ನಲ್ಲಿ ನಡೆದ 57ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷ ಹಾ. ಮಾ. ನಾಯಕ ಬಿಡುಗಡೆ ಮಾಡಿ ಶುಭ ಹಾರೈಸಿದರು. ಬಿ. ಆರ್. ಪ್ರಾಜೆಕ್ಟ್‌ನ ಕನ್ನಡ ಉಪನ್ಯಾಸಕ ಡಾ!! ಶ್ರೀಕಂಠ ಕೂಡಿಗೆ, ವಿರೇಂದ್ರಹೆಗ್ಗಡೆಯವರು, ಪೇಜಾವರ ಮಠಾಧೀಶರು ಮುಂತಾದವರೂ ಶುಭಹಾರೈಸಿರುವುದಾಗಿ ಗಂಗಾಧರ್ ತಿಳಿಸಿದ್ದಾರೆ.

ನಂ. ಸಿಆರ್. 11(4)/84-85

ಪುರಸಭಾ ಕಾರ್ಯಾಲಯ,
ಕೊಪ್ಪ.
1ನೇ ಏಪ್ರಿಲ್ 1985.

ಪುರಸಭೆಯ ಜಾಗದಲ್ಲಿ ಹಂಗಾಮಿ ನೆಲಬಾಡಿಗೆಯ ಮೇಲೆ ವ್ಯಾಪಾರ ಮಾಡುತ್ತಿರುವವರಿಗೆ

ಅಂತಿಮ ತಿಳುವಳಿಕೆ

ಈ ಮೂಲಕ ಸಂಬಂಧಪಟ್ಟವರಿಗೆ ಅಂತಿಮವಾಗಿ ತಿಳಿಯಪಡಿಸುವುದೇನೆಂದರೆ, ಈ ಕಾರ್ಯಾಲಯದಿಂದ ದಿನಾಂಕ 15ನೇ ಮೇ 1984, 12-12-1984, 31-12-1984 ಹಾಗೂ 2-2-1985 ನೋಟೀಸುಗಳ ಮೂಲಕ ತಿಳುವಳಿಕೆ ನೀಡಿ, ಈ ಪುರಸಭೆಗೆ ಕಟ್ಟಬೇಕಾದ ಬಾಕಿಯನ್ನು ಪೂರ್ತಿ ಪಾವತಿಸಿ, ಪುರಸಭಾ ಜಾಗದಲ್ಲಿ ಮುಂದುವರಿಯುವುದಕ್ಕೆ ಹೊಸದಾಗಿ ಕಾನೂನು ಪ್ರಕಾರ ಕರಾರು ಬರೆದುಕೊಡತಕ್ಕದ್ದೆಂದು ಹಾಗೂ 6 ತಿಂಗಳ ಮೊಬಲಗನ್ನು ಮುಂಗಡವಾಗಿ ಕಟ್ಟತಕ್ಕದ್ದೆಂದು ತಿಳಿಸಿದ್ದರೂ ಸಹ 6 ತಿಂಗಳ ಮುಂಗಡ ಮತ್ತು ಕರಾರು ಪತ್ರವನ್ನು ಹಾಗೂ ಬಾಕಿಯನ್ನು ಈ ತಹಲ್‌ವರೆವಿಗೂ ಪಾವತಿಸಿರುವುದಿಲ್ಲ. ಆದ್ದರಿಂದ ಸಂಬಂಧಪಟ್ಟವರು 30-4-1985ರೊಳಗಾಗಿ ಈ ಪುರಸಭೆಗೆ ಕಟ್ಟಬೇಕಾದ ಎಲ್ಲಾ ಹಿಂದಿನ ಬಾಕಿಯನ್ನೂ ಕಟ್ಟುವುದಲ್ಲದೆ, 1-4-85ರಿಂದ ಚ. ಅ. ಒಂದಕ್ಕೆ ಮಾಹೆಯಾನ 20 ಪೈಸೆ ನೆಲಬಾಡಿಗೆ ದರದಲ್ಲಿ 6 ತಿಂಗಳ ಮುಂಗಡ ಕಟ್ಟಿ ಕಾನೂನು ಪ್ರಕಾರ ಕರಾರು ಬರೆದುಕೊಡತಕ್ಕದ್ದು. ತಪ್ಪಿದಲ್ಲಿ, ಸಂಬಂಧಪಟ್ಟವರು ಬಗರ್‌ಹುಕುಂ ಮೇಲೆ ಇರುತ್ತಾರೆಂದು ಪರಿಗಣಿಸಿ ಪುರಸಭೆ ಜಾಗದಿಂದ ಅವರುಗಳನ್ನು ತೆರವು ಮಾಡಿಸಲು ಕ್ರಮ ಕೈಗೊಳ್ಳಲಾಗುವುದು. ತಿಳಿಯುವುದು.

(ಸಹಿ) ಆರ್. ಗುಂಡೂರಾವ್,
ಮುಖ್ಯಾಧಿಕಾರಿಗಳು,
ಪುರಸಭಾ ಕಾರ್ಯಾಲಯ, ಕೊಪ್ಪ,
ಚಿಕ್ಕಮಗಳೂರು ಜಿಲ್ಲೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿ.ಮನೆ ನಾಗರಾಜ್; ಅಚ್ಚು: ದೀಪಿಕೆ ಅಚ್ಚು ಕೂಟ, ಕೊಪ್ಪ.